5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆ, ಪುತ್ತೂರು, ದ.ಕ.

## ಸ್ಪೆಷಲ್ ಕೇಸ್ ನಂಬ್ರ 5035/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸೀತಾರಾಮ ಗೌಡ | ಪ್ರಾ.ಸಾಃ 1 |
| ತಂದೆಯ ಹೆಸರು | : | ದಿ. ಕುಶಾಲಪ್ಪ ಗೌಡ | |
| ಪ್ರಾಯ | : | 56 ವರ್ಷ | ದಿನಾಂಕಃ **12.02.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ಪೊಲೀಸ್ ಉಪನಿರೀಕ್ಷಕರು | |
| ವಾಸಸ್ಥಳ | : | ಸುಬ್ರಹ್ಮಣ್ಯ. | |

## ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿದಾರರ ಹೇಳಿಕೆ.

ಮುಖ್ಯ ವಿಚಾರಣೆಃ  ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು 2018 ರಿಂದ ಜುಲೈ 2024ರ ವರೆಗೆ ಉಪ್ಪಿನಂಗಡಿಯಲ್ಲಿ ಪೊಲೀಸ್ ಠಾಣೆಯಲ್ಲಿ ಸಹಾಯಕ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.  ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಬಾತಿ @ ಮೊಹಮ್ಮದ್ ಬಾತಿಷಾ ಈತನ ವಿರುದ್ಧ ಉದ್ಘೋಷಣೆ ಜಾರಿ ಮಾಡಲು ದಿನಾಂಕ 20.06.2024 ರಂದು ಆರೋಪಿಯು ವಾಸ್ತವ್ಯವಿರುವ ಕೇರಳ ರಾಜ್ಯದ ಕಾಸರಗೋಡು ತಾಲೂಕಿನ ಮಂಗಲ್ಪಾಡಿ ಗ್ರಾಮದ ಇಸ್ಲಾಂಪುರ ಪೆರಿಂಗಡಿ ಎಂಬಲ್ಲಿಗೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಆರೋಪಿಯ ತಂದೆ ಹಾಜರಿದ್ದು, ಆರೋಪಿಯು ಮನೆ ಬಿಟ್ಟು ಹೋಗಿರುವುದಾಗಿ ತಿಳಿಸಿರುತ್ತಾರೆ.  ನಂತರ ಆರೋಪಿಯು ಎಲ್ಲಿದ್ದರೂ ಸಹ ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಆರೋಪಿಯ ಮನೆಗೆ ಮತ್ತು ಆತನ ನೆರೆಕೆರೆಯವರಿಗೆ ತಿಳಿಸಿರುತ್ತೇನೆ.  ನಂತರ ಅಲ್ಲಿ ಪಂಚಾಯತುದಾರರನ್ನು ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಉದ್ಘೋಷಣೆಯ ಒಂದು ಪ್ರತಿಯನ್ನು ಆರೋಪಿಯು ವಾಸವಿರುವ ಮನೆಯ ಗೋಡೆಗೆ ಅಂಟಿಸಿರುತ್ತೇನೆ.  ನಂತರ ಅಲ್ಲಿಂದ ಪೆರಿಂಗಡಿ ಬಸ್ ನಿಲ್ದಾಣಕ್ಕೆ ತೆರಳಿ

ಟಾಂ ಟಾಂ ಮಾಡಿ, ಉದ್ಘೋಷಣೆಯ ಒಂದು ಪ್ರತಿಯನ್ನು ಅಲ್ಲಿ ಅಂಟಿಸಿರುತ್ತೇನೆ. ನಂತರ ಅಲ್ಲಿಂದ ಗ್ರಾಮ ಪಂಚಾಯತ್ ಕಛೇರಿಗೆ ತೆರಳಿ ಅಲ್ಲಿಯ ನೋಟೀಸ್ ಬೋರ್ಡಿಗೆ ಉದ್ಘೋಷಣೆಯ ಒಂದು ಪ್ರತಿಯನ್ನು ಅಂಟಿಸಿರುತ್ತೇನೆ. ನಂತರ ಸ್ಥಳದಲ್ಲಿ ಆ ಬಗ್ಗೆ ಮಧ್ಯಾಹ್ನ 12.00 ಗಂಟೆಯಿಂದ 12.45 ಗಂಟೆಯ ವರೆಗೆ ಮಹಜರು ತಯಾರಿಸಿರುತ್ತೇನೆ. ನಂತರ ವಾರಂಟನ್ನು ಮಹಜರಿನೊಂದಿಗೆ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಉದ್ಘೋಷಣೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-2 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.